ದಿನಾಂಕ ಃ 03.03.2014.

ಓ.ಎಸ್. 54ಃ2011

ಡಿ.ಡಬ್ಲು. 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ 1ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಹೆಚ್ ವಿ ಬಿ ರವರಿಂದಃ**

ನನ್ನ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿವೆ.

ಈ ಕೆಳಕಂಡ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೇನೆ. ಅವುಗಳನ್ನು ಈ ಕೆಳಕಂಡಂತೆ ನಿಶಾನಿಸಲಾಗಿದೆ.

ದಾವಾ ಸ್ವತ್ತಿಗೆ ಸಂಬಂಧಪಟ್ಟ ಒಟ್ಟು 2 ಆರ್ ಟಿ ಸಿ ಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿ ಡಿ 1 ಮತ್ತು 2 ಕ್ಕೆ, ಅದೇ ರೀತಿ ದಾವಾ ಮನೆಗೆ ಸಂಬಂಧಪಟ್ಟ ಅಸೆಸ್‌ಮೆಂಟ್ ರಿಜಿಸ್ಟರ್ ಎಕ್ಸ್‌ಟ್ರಾಕ್ಟ್‌ನ ದೃಢೀಕೃತ ನಕಲನ್ನು ನಿ ಡಿ 3 ಕ್ಕೆ, ತೆರಿಗೆ ಪಾವತಿ ರಶೀದಿಯನ್ನು ಹಾಜರು ಮಾಡಿದ್ದು ನಿ ಡಿ 4 ಕ್ಕೆ, ಮಾನ್ಯ ಉಪ ವಿಭಾಗಾಧಿಕಾರಿಗಳು ಆರ್.ಮಿಸ್ 37ಃ93-94 ರಲ್ಲಿ ಮಾಡಿರುವ ಆದೇಶದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ ಡಿ 5 ಕ್ಕೆ, ವಳಗೆರೆಹಳ್ಳಿ ಗ್ರಾಮ ಪಂಚಾಯಿತಿಯವರು ನೀಡಿರುವ ಹಿಂಬರಹವನ್ನು ನಿ ಡಿ 6 ಕ್ಕೆ, ದಾವಾ ಮನೆಗೆ ಸಂಬಂಧಪಟ್ಟ ಒಂದು ಭಾವಚಿತ್ರ ಮತ್ತು ಸಿ ಡಿ ಯನ್ನು ಹಾಜರು ಮಾಡಿದ್ದು ಅವುಗಳನ್ನು ನಿ ಡಿ 7 ಮತ್ತು ನಿ ಡಿ 7(ಎ) ಗೆ, ಮಳೆಯ ನೀರಿನಿಂದ ದಾವಾ ಮನೆಯ ಗೋಡೆ ಕುಸಿದು ಬಿದ್ದಿದ್ದು ಈ ಬಗ್ಗೆ ಆಂದೋಲನ ಕನ್ನಡ ದಿನಪತ್ರಿಕೆಯಲ್ಲಿ ಪ್ರಕಟಣೆ ಬಂದಿದ್ದು ಸದರಿ ದಿನಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿ ಡಿ 8 ಕ್ಕೆ ನಿಶಾನಿಸಲಾಯಿತು. ಆದ್ದರಿಂದ ವಾದಿಯ ದಾವಾವನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲು ಃ ವಾದಿ ಪರ ವಕೀಲರಾದ ಶ್ರೀ ರವರಿಂದ ಃ**

**ವಾದಿ ಪರ ವಕೀಲರ ಕೋರಿಗೆ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.**

**ಮರು ವಿಚಾರಣೆಃ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**

ಮದ್ದೂರು.

ದಿನಾಂಕ : 30.06.2014.

ಓ.ಎಸ್.54-2011

ಡಿ.ಡಬ್ಲ್ಯೂ 1

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ.ಹೆಚ್.ಪಿ.ಎಸ್.ರವರಿಂದಃ**

ನಾನು ಎಸ್ ಎಸ್ ಎಲ್ ಸಿ ವರೆಗೆ ವ್ಯಾಸಂಗ ಮಾಡಿದ್ದೇನೆ. ನನ್ನ ತಾತನ ಹೆಸರು ನೀಲಕಂಠಾಚಾರಿ ಎಂದರೆ ನಿಜ. ನನ್ನ ತಾತ ನೀಲಕಂಠಾಚಾರಿ ಇವರಿಗೆ ನನ್ನ ತಂದೆಯವರು ಸೇರಿ ಒಟ್ಟು ಮೂರು ಜನ ಗಂಡು ಮಕ್ಕಳು ಎಂದರೆ ನಿಜ. ನನ್ನ ತಂದೆಯವರು ಮರಣ ಹೊಂದಿ ಹೀಗ್ಗೆ ಸುಮಾರು 20 ವರ್ಷಗಳಾಗಿವೆ. ಈ ಕೇಸಿನ ಒಂದನೇ ವಾದಿ ಗೌರಮ್ಮ ನನ್ನ ತಾಯಿ. ನನ್ನ ತಂದೆ ಮತ್ತು ತಾಯಿಗೆ ನಾನು ಸೇರಿ ಒಟ್ಟು 12 ಜನ ಮಕ್ಕಳು ಎಂದರೆ ನಿಜ. ನನ್ನ ಸೆಹೋದರ ಮತ್ತು ಸಹೋದರಿಯರ ಪೈಕಿ ಶಾರದ, ಪ್ರಕಾಶ ಮತ್ತು ಆನಂದ ಎಂಬುವವರು ಮದುವೆಯಾಗದೇ ಮರಣ ಹೊಂದಿರುತ್ತಾರೆ ಎಂದರೆ ನಿಜ. ನನ್ನ ಅಕ್ಕ ಪದ್ಮ ಇವರು ಸಹ ತೀರಿಕೊಂಡಿದ್ದು ಆಕೆಯ ಮಗ ಈ ಕೇಸಿನ 8ನೇ ಪ್ರತಿವಾದಿ ಎಂದರೆ ನಿಜ. ನನ್ನ ತಂಗಿ ಸುಮಿತ್ರ ಈಕೆಯೂ ಸಹ ಮರಣಹೊಂದಿದ್ದು ಈ ಕೇಸಿನ 2ನೇ ಪ್ರತಿವಾದಿ ಆಕೆಯ ಗಂಡ ಎಂದರೆ ನಿಜ.ನನ್ನ ಮತ್ತೂಬ್ಬ ತಂಗಿ ಶಿವಮ್ಮ ಸಹ ಮರಣಹೊಂದಿದ್ದು ಈ ಕೇಸಿನ 10ನೇ ವಾದಿ ಆಕೆಯ ಮಗಳು ಮತ್ತು 3ನೇ ಪ್ರತಿವಾದಿ ಆಕೆಯ ಗಂಡ ಎಂದರೆ ನಿಜ. 2 ಮತ್ತು 3ನೇ ವಾದಿಯರ ಮದುವೆಯು ಕ್ರಮವಾಗಿ 1995 ಮತ್ತು 2010 ನೇ ಇಸವಿಯಲ್ಲಿ ನಡೆದಿರುತ್ತದೆ ಎಂದರೆ ನಿಜ.

ನನ್ನ ತಾತ ನೀಲಕಂಠಾಚಾರಿ ಇವರ ಸ್ವಂತ ಸ್ಥಳ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಚಿಕ್ಕನಹಳ್ಳಿ ಗ್ರಾಮ ಎಂದರೆ ನಿಜ. ನನ್ನ ತಾತ ನೀಲಕಂಠಾಚಾರಿಯವರು ವಯಸ್ಸು ಮಾಗುವವರೆಗೆ ಚಿಕ್ಕನಹಳ್ಳಿ ಗ್ರಾಮದಲ್ಲಿಯೇ ವಾಸವಾಗಿದ್ದು ಆ ನಂತರ ವೃದ್ಧಾಪ್ಯದ ಕಾರಣ ವಳಗೆರೆಹಳ್ಳಿಗೆ ಬಂದು ನೆಲೆಸಿದ್ದರು. ನನ್ನ ಚಿಕ್ಕಪ್ಪ ನಿಂಗಾಚಾರಿ ಕ್ರಮೇಣವಾಗಿ ವಳಗೆರೆಹಳ್ಳಿಗೆ ಬಂದು ನೆಲೆಸಿದರು. ಮತ್ತೊಬ್ಬ ಚಿಕ್ಕಪ್ಪ ಪುಟ್ಟಯ್ಯ ಚಿಕ್ಕನಹಳ್ಳಿ ಗ್ರಾಮದಲ್ಲಿಯೇ ಉಳಿದುಕೊಂಡರು. ನನ್ನ ತಾತ ನೀಲಕಂಠಾಚಾರಿ ಇವರಿಗೆ ಚಿಕ್ಕನಹಳ್ಳಿ ಗ್ರಾಮದಲ್ಲಿ ಒಂದು ವಾಸದ ಮನೆ ಮತ್ತು ಜಮೀನು ಇತ್ತು , ಆದರೆ ಒಟ್ಟು ಎಷ್ಟು ಎಕರೆ ಜಮೀನು ಇತ್ತು ಅಂತ ನನಗೆ ಗೊತ್ತಿಲ್ಲ, ಅಂದಾಜು ಎಷ್ಟು ಎಕರೆ ಜಮೀನು ಇತ್ತು ಎಂಬುದಾಗಿಯಾ ಸಹ ನನಗೆ ಹೇಳಲಾಗುವುದಿಲ್ಲ, ನನ್ನ ತಾತನಿಗೆ ವಯಸ್ಸಾದ ನಂತರ ನಮ್ಮ ತಂದೆಯವರ ಜೊತೆಯಲ್ಲಿ ನೆಲೆಸಿದ್ದರು. ನನ್ನ ತಾತನಿಗಿಂತ ಮುಂಚೆಯೇ ನನ್ನ ತಂದೆಯವರು ವಳಗೆರೆಹಳ್ಳಿ ಗ್ರಾಮಕ್ಕೆ ಬಂದು ನೆಲೆಸಿದ್ದರು. ನಾನು ಹುಟ್ಟುವುದಕ್ಕಿಂತ ಮುಂಚೆಯೇ ನನ್ನ ತಂದೆಯವರು ವಳಗೆರೆಹಳ್ಳಿಗೆ ಬಂದು ನೆಲೆಸಿದ್ದರು. ನನ್ನ ತಾತನ ಹೆಸರಿನಲ್ಲಿದ್ದ ವಾಸದ ಮನೆಯನ್ನು ನನ್ನ ಕೊನೆಯ ಚಿಕ್ಕಪ್ಪನಿಗೆ ಬಿಟ್ಟುಕೊಟ್ಟಿದ್ದರು. ಜಮೀನು ಏನಾಯಿತು ಎಂದರೆ ಸಾಕ್ಷಿಯು ನನ್ನ ತಂದೆ ಮತ್ತು ನನ್ನ ಇನ್ನೊಬ್ಬ ಚಿಕ್ಕಪ್ಪ ನಿಂಗಾಚಾರಿ ಇಬ್ಬರು ಜಮೀನಿನ ಬಗ್ಗೆ ಏನೋ ಹಣಕಾಸಿನ ಬಗ್ಗೆ ವ್ಯವಹಾರ ಮಾಡಿಕೊಂಡು ತಮ್ಮನಿಗೆ ಬಿಟ್ಟು ಬಂದಿರಬೇಕು ನನಗೆ ಸರಿಯಾಗಿ ಗೊತ್ತಿಲ್ಲ, ಜಮೀನಿನ

ಬಗ್ಗೆ ನಡೆದ ಹಣ ಕಾಸಿನ ವ್ಯವಹಾರದ ಬಗ್ಗೆ ನಾನು ನನ್ನ ತಂದೆಯವರನ್ನು ಕುರಿತು ವಿಚಾರಿಸಿಲ್ಲ. ನನ್ನ ತಂದೆಯವರು ವಳಗೆರೆಹಳ್ಳಿಗೆ ಬಂದ ನಂತರ ನಮ್ಮ ಮನೆಯ ಮತ್ತು ಕುಟುಂಬದ ವ್ಯವಹಾರಗಳನ್ನು ನಮ್ಮ ತಂದೆಯವರೇ ನಿಭಾಯಿಸುತ್ತಿದ್ದರು ಎಂದರೆ ನಿಜ. ನನ್ನ ತಂದೆಯವರು ನಮ್ಮ ಕುಟುಂಬದ ವ್ಯವಹಾರವನ್ನು ನಿಭಾಯಿಸುತ್ತಿದ್ದು ಪ್ರಸ್ತುತ ದಾವಾ ಸ್ವತ್ತುಗಳನ್ನು ನನ್ನ ತಂದೆಯವರ ಸಂಪಾದನೆಯಿಂದ ಅರ್ಜಿಸಿದ್ದರು ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ನಾನೂ ಸಹ ದುಡಿಯುತ್ತಾ ಇದ್ದೆ ಎಂದು. ಈ ಪ್ರಸ್ತುತ ದಾವಾ ಐಟಂ 1 ರಿಂದ 5 ಹೊರತು ಪಡಿಸಿ ಈ ದಾವಾ ದಾಖಲು ಮಾಡುವ ಕಾಲಕ್ಕೆ ನಮ್ಮ ಕುಟುಂಬಕ್ಕೆ ಸೇರಿದ ಬೇರೆ ಯಾವುದೇ ಸ್ವತ್ತುಗಳು ಇರುವುದಿಲ್ಲ. ದಾವಾ 4 ಮತ್ತು 5ನೇ ಐಟಂ ಸ್ವತ್ತುಗಳ ಮನೆಗಳನ್ನು ನನ್ನ ತಂದೆಯವರು ಬದುಕಿದ್ದ ಕಾಲಕ್ಕೆ ನಿರ್ಮಿಸಿದಂತಹ ಮನೆಗಳು ಎಂದರೆ ನಿಜ. ನನ್ನ ಅಕ್ಕ ತಂಗಿಯರು ಅವರುಗಳ ಮದುವೆಯಾಗುವ ವರೆಗೆ ನಮ್ಮ ಮನೆಯಲ್ಲಿಯೇ ನಮ್ಮ ತಂದೆ ತಾಯಿ ಜೊತೆ ವಾಸ ಇದ್ದರು ಎಂದರೆ ನಿಜ. ನಮ್ಮ ತಂದೆಯವರು ಬದುಕಿರುವವರೆಗೆ ದಾವಾ 4 ಮತ್ತು 5ನೇ ಐಟಂ ಸ್ವತ್ತುಗಳ ಮನೆಯಲ್ಲಿಯೇ ವಾಸವಿದ್ದರು. ನನ್ನ ತಾಯಿ ಅಂದರೆ 1ನೇ ವಾದಿ ಗೌರಮ್ಮ ಈಗಲೂ ಸಹ ಸದರಿ ಮನೆಯಲ್ಲಿ ವಾಸ ಇದ್ದಾರೆ ಎಂದರೆ ನಿಜ.

ನಾವು ಪಂಚಾಯಿತ್ತಿ ಮುಖೇನ ಆಸ್ತಿಗಳನ್ನು ಹಂಚಿಕೆ ಮಾಡಿಕೊಂಡಿದ್ದೇವೆ , ಆದರೆ ಈ ಬಗ್ಗೆ ಯಾವುದೇ ಬರವಣಿಗೆ ಮೂಲಕ ದಾಖಲೆಗಳನ್ನು ಮಾಡಿಕೊಂಡಿಲ್ಲ. ಜೂನ್ ತಿಂಗಳ 1992ನೇ ಇಸವಿಯಲ್ಲಿ ಆ ರೀತಿ ಹಂಚಿಕೆ ಮಾಡಿಕೊಂಡಿದ್ದೇವೆ. ಆದರೆ ಯಾವ ದಿನಾಂಕ ಅಂತ ನನಗೆ ಹೇಳಲಾಗುವುದಿಲ್ಲ. ನಮ್ಮ ಮನೆಯಲ್ಲಿಯೇ ಈ ಬಗ್ಗೆ ಪಂಚಾಯಿತ್ತಿ ಸೇರಿಸಲಾಗಿತ್ತು. ಸದರಿ ಪಂಚಾಯಿತ್ತಿಯಲ್ಲಿ ಮುನಿಗೌಡ , ಬಿ.ಶಿವಣ್ಣಗೌಡ , ಚಿಕ್ಕಮಾಯಿಗೌಡ , ಮೊಳ್ಳೆಬೋರಯ್ಯ ಇವರುಗಳು ಸೇರಿದ್ದರು. ಸದರಿ ಪಂಚಾಯಿತಿ ನಡೆದ ಕಾಲಕ್ಕೆ ನಮ್ಮ ಮನೆಯಲ್ಲಿ ಇನ್ನು ಮದುವೆಯಾಗದ ಹೆಣ್ಣು ಮಕ್ಕಳು ಅಂದರೆ 2 ಮತ್ತು 3ನೇ ವಾದಿಯರು ಇದ್ದರು. ಆದರೆ ಅವರುಗಳಿಗೆ ಆಸ್ತಿಯಲ್ಲಿ ಹಂಚಿಕೆ ಮಾಡಿರುವುದಿಲ್ಲ. ಆ ರೀತಿ ಆಸ್ತಿಗಳನ್ನು ಹಂಚಿಕೆ ಮಾಡಿದ ನಂತರ ನನ್ನ ತಂದೆಯವರು ಸಂಬಂಧಪಟ್ಟ ಪಂಚಾಯಿತಿ ಕಛೇರಿಗೆ ಮತ್ತು ಕಂದಾಯ ಇಲಾಖೆಗೆ ಸ್ವತ್ತುಗಳ ಬಗ್ಗೆ ಖಾತೆ ಮಾಡುವ ಕುರಿತು ಅರ್ಜಿ ಕೊಟ್ಟಿದ್ದರಾ ಎಂದರೆ ಹೌದು ಎನ್ನುತ್ತಾರೆ. ಆಸ್ತಿ ಹಂಚಿಕೆಯಾದ 3-4 ದಿನಗಳ ನಂತರ ಆ ರೀತಿ ನನ್ನ ತಂದೆಯವರು ಅರ್ಜಿ ಸಲ್ಲಿಸಿದ್ದರು. ಆ ರೀತಿ ನನ್ನ ತಂದೆಯವರು ಅರ್ಜಿ ಕೊಟ್ಟ ಬಗ್ಗೆ ಸಂಬಂಧಪಟ್ಟ ಅರ್ಜಿಯ ನಕಲು ಏನಾದರು ನಿಮ್ಮ ಬಳಿ ಇದೆಯಾ ಅಥವಾ ಸದರಿ ಕಛೇರಿಗಳಲ್ಲಿ ಲಭ್ಯ ಇವೆಯಾ ಎಂದರೆ ಸಾಕ್ಷಿಯು ಯಾವುದೇ ದಾಖಲೆಗಳು ಇಲ್ಲ ಎನ್ನುತ್ತಾರೆ. ನನ್ನ ತಂದೆಯವರು ಆ ರೀತಿ ಅರ್ಜಿ ಸಲ್ಲಿಸಿದ್ದರ ಬಗ್ಗೆ ಸಂಬಂಧಪಟ್ಟ ಕಛೇರಿಗಳಿಗೆ ನಾನು ಹೋಗಿ ವಿಚಾರಣೆ ಮಾಡಿರುವುದಿಲ್ಲ.

ನಾನು ಮತ್ತು ಈ ಕೇಸಿನ 6ನೇ ವಾದಿ ಇಬ್ಬರು ನಮ್ಮ ಕುಟುಂಬದ ಆಸ್ತಿಗಳನ್ನು ಹಂಚಿಕೆ ಮಾಡಿಕೊಂಡಿದ್ದೇವೆ. ನನ್ನ ತಂದೆಯವರು ಯಾವುದೇ ಆಸ್ತಿಗಳನ್ನು ಉಳಿಸಿಕೊಂಡಿರುವುದಿಲ್ಲ. ನಮ್ಮ ತಂದೆಯವರು ನಮ್ಮಿಬ್ಬರನ್ನು ಕುರಿತು ನನಗೆ ಯಾವುದೇ ಆಸ್ತಿ ಬೇಡ ನೀವೇ ತೆಗೆದುಕೊಳ್ಳಿ ಎಂಬುದಾಗಿ ಹೇಳಿದ್ದರಿಂದ ಅವರಿಗೆ ಯಾವುದೇ ಆಸ್ತಿ ಕೊಟ್ಟಿರುವುದಿಲ್ಲ. ನನ್ನ ತಂದೆ ಮತ್ತು ನನ್ನ

ತಾಯಿ ಇಬ್ಬರಿಗೂ ಸೇರಿ 5ನೇ ಐಟಂ ಸ್ವತ್ತನ್ನು ಬಿಟ್ಟು ಕೊಡಲಾಯಿತು. ಆ ರೀತಿ 5ನೇ ಐಟಂ ಸ್ವತ್ತನ್ನು ನನ್ನ ತಂದೆ ಮತ್ತು ತಾಯಿಗೆ ಬಿಟ್ಟು ಕೊಟ್ಟ ನಂತರ ಸದರಿ ಸ್ವತ್ತಿನ ಬಗ್ಗೆ ನನ್ನ ತಂದೆಯವರ ಹೆಸರಿಗಾಗಲೀ ಅಥವಾ ನನ್ನ ತಾಯಿಯವರ ಹೆಸರಿಗಾಗಲೀ ಪಂಚಾಯಿತಿ ದಾಖಲೆಗಳು ಬಂದಿರುವುದಿಲ್ಲ. ನನ್ನ ತಂದೆಯವರು 5ನೇ ಐಟಂ ಸ್ವತ್ತಿಗೆ ಸಂಬಂಧಪಟ್ಟಂತೆ ಪಂಚಾಯಿತಿ ಕಛೇರಿಯಲ್ಲಿ ಸದರಿ ವಿಭಾಗದಂತೆ ಎಂದಿಗೂ ಸಹ ಕಂದಾಯ ಪಾವತಿ ಮಾಡಿರುವುದಿಲ್ಲ. ಪಂಚಾಯಿತಿಯಲ್ಲಿ ನನ್ನ ತಂದೆ ತಾಯಿಯವರ ಊಟ ಬಟ್ಟೆ ಔಷದೋಪಚಾರ ಮತ್ತು ಯೋಗಕ್ಷೇಮದ ಬಗ್ಗೆ ಮಾತು ಕತೆ ನಡೆಯಿತು. ಸದರಿ ಮಾತುಕತೆಯಲ್ಲಿ ನನ್ನ ತಂದೆ ಮತ್ತು ತಾಯಿ ನಮ್ಮ ಯೋಗಕ್ಷೇಮಕ್ಕೆ ಮತ್ತು ಊಟ ಬಟ್ಟೆಗೆ ನಮಗೆ ಅನುಕೂಲ ಇರುತ್ತದೆ ಬೇಕಾದಾಗ ನಾವೇ ಕೇಳುತ್ತೇವೆ ಎಂದು ತಿಳಿಸಿದ್ದರು. ನನ್ನ ತಂದೆ ತಾಯಿಗೆ ಯಾವುದೇ ಪ್ರತ್ಯೇಕ ಆಸ್ತಿ ಉಳಿದಿರಲಿಲ್ಲ . ಆದರೆ ಅವರ ಬಳಿ ಹಣಕಾಸು ಇತ್ತು. ಹಣಕಾಸು ಇಟ್ಟುಕೊಂಡಿದ್ದ ಬಗ್ಗೆ ಏನಾದರೂ ಬ್ಯಾಂಕಿನಲ್ಲಿ ಖಾತೆ ಹೊಂದಿದ್ದಾರಾ ಎಂಬ ಬಗ್ಗೆ ನಾವು ವಿಚಾರಿಸಿದಕ್ಕೆ ನಿಮಗ್ಯಾಕೆ ನಾವು ಹೇಗೋ ಹಣ ಇಟ್ಟುಕೊಂಡಿದ್ದೇವೆ ಎಂದು ತಿಳಿಸಿದ್ದರು. ಆ ಕಾಲಕ್ಕೆ ನನ್ನ ತಂದೆ ಮತ್ತು ತಾಯಿಯ ಬಳಿ ಎಷ್ಟು ಹಣಕಾಸು ಇತ್ತು ಅಂತ ನನಗೆ ಹೇಳಲಾಗುವುದಿಲ್ಲ.

ಸದರಿ ವಿಭಾಗದಲ್ಲಿ ನನ್ನ ಭಾಗಕ್ಕೆ ಪೂರ್ವಭಾಗದ ಮನೆ, ಒಂದು ಎಕರೆ ಗದ್ದೆ , 12 ಗುಂಟೆ ಖುಷ್ಕಿ ಜಮೀನು ಬಂದಿದ್ದವು. ಸದರಿ ಪೂರ್ವಭಾಗದ ಮನೆಯ ದಾಖಲೆಯು ಪಂಚಾಯಿತಿಯಲ್ಲಿ ನನ್ನ ಹೆಸರಿಗೆ ಬರಲಿಲ್ಲ. 12 ಗುಂಟೆ ಖುಷ್ಕಿ ಜಮೀನಿನ ಕಂದಾಯ ದಾಖಲೆಯೂ ಸಹ ನನ್ನ ಹೆಸರಿಗೆ ಬರಲಿಲ್ಲ. ಆ ರೀತಿ ವಿಭಾಗದ ಆದ ನಂತರ ಪೂರ್ವ ಭಾಗದ ಮನೆ ಮತ್ತು 12 ಗುಂಟೆ ಖುಷ್ಕಿ ಜಮೀನಿನ ಬಗ್ಗೆ ನನ್ನ ಹೆಸರಿಗೆ ಖಾತೆ ಮತ್ತು ಕಂದಾಯ ದಾಖಲೆಯನ್ನು ಮಾಡಿಕೊಡಬೇಕೆಂದು ಪಂಚಾಯಿತಿ ಕಛೇರಿಗಾಗಲೀ ಅಥವಾ ಕಂದಾಯ ಇಲಾಖೆಗಾಗಲೀ ನಾನು ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. ಅದೇ ರೀತಿ ನನ್ನ ತಂದೆಯವರು ಸಹ ಸದರಿ ಇಲಾಖೆಗಳಿಗೆ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನಿಧಾನವಾಗಿ ತದ ನಂತರ ನನ್ನ ಹೆಸರಿಗೆ ಖಾತೆ ವಗ್ಯೆರೆ ಮಾಡಿಸಿಕೊಳ್ಳೋಣ ಎಂಬುದಾಗಿ ತೀರ್ಮಾನಿಸಿ ಇದುವರೆಗೂ ನಾನು ಸಂಬಂಧಪಟ್ಟ ಇಲಾಖೆಗೆ ಅರ್ಜಿ ಸಲ್ಲಿಸಿ ನನ್ನ ಹೆಸರಿಗೆ ದಾಖಲೆಗಳನ್ನು ಮಾಡಿಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ. ಕಳೆದ 22 ವರ್ಷಗಳಿಂದ ನನ್ನ ಭಾಗಕ್ಕೆ ಬಂದ ಸ್ವತುತ್ತಗಳ ಬಗ್ಗೆ ನನ್ನ ಹೆಸರಿಗೆ ಖಾತೆ ಮತ್ತು ವಗ್ಯೆರೆ ದಾಖಲೆಗಳನ್ನು ಮಾಡಿಸಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ.

ಸದರಿ ವಿಭಾಗದಲ್ಲಿ ಪಶ್ಚಿಮಾರ್ಧದ ಮನೆಯನ್ನು ನನ್ನ ತಮ್ಮ 6ನೇ ವಾದಿಗೆ ಕೊಡಲಾಗಿದೆ. ಅದೇ ರೀತಿ 11 ಗುಂಟೆ ಖುಷ್ಕಿ ಜಮೀನು ಮತ್ತು ಒಂದು ಎಕರೆ ಗದ್ದೆ ಇವುಗಳನ್ನು ಸಹ ಕೊಡಲಾಗಿದೆ. ನನ್ನ ತಮ್ಮನ ಹಿಸ್ಸೆಗೆ ಹೋಗಿರುವ ಸ್ವತುತ್ತಗಳ ಬಗ್ಗೆ ಆತನ ಹೆಸರಿಗೆ ಖಾತೆ ವಗ್ಯೆರೆ ಮಾಡಿಕೊಡಿ ಎಂಬುದಾಗಿ ನಾನಾಗಲೀ , ನನ್ನ ತಂದೆಯಾಗಲೀ ಅಥವಾ ನನ್ನ ತಮ್ಮ 6ನೇ ವಾದಿಯಾಗಲೀ ಸಂಬಂಧಪಟ್ಟ ಇಲಾಖೆಗೆ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನನ್ನ ತಮ್ಮ

6ನೇ ವಾದಿಯು ಯಾವ ಕಾರಣಕ್ಕಾಗಿ ಆ ರೀತಿ ತನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಂಡಿರುವುದಿಲ್ಲ ಅಂತ ನಾನೂ ಸಹ ಆತನನ್ನು ವಿಚಾರಿಸಿಲ್ಲ ಮತ್ತು ಆ ಬಗ್ಗೆ ನನಗೆ ಗೊತ್ತಿಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಒ.ಹೇ.ಕೇ. ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮದ್ದೂರು.**

ದಿನಾಂಕ : 08.09.2014.
ಓ.ಎಸ್.54-2011
ಡಿ.ಡಬ್ಲ್ಯೂ 1

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ. ಹೆಚ್.ಪಿ.ಎಸ್. ರವರಿಂದಃ**

ನಮ್ಮ ಅಣ್ಣ ತಮ್ಮಂದಿರುಗಳು ಯಾವುದೇ ಜಗಳ ಅಥವಾ ಗಲಾಟೆ ಮಾಡಿಕೊಂಡಿರಲಿಲ್ಲ. ಅದೇ ರೀತಿ ನಾವುಗಳು ಯಾರೂ ಸಹ ನಮ್ಮ ತಂದೆಯವರ ಮೇಲೆ ಗಲಾಟೆ ಮಾಡಿರುವುದಿಲ್ಲ. ಆ ರೀತಿ ಭಾಗ ಮಾಡಲು ಏನು ಕಾರಣ ಅಂತ ನನಗೆ ಗೊತ್ತಿಲ್ಲ. ಮೊದಲಿಗೆ ನಮ್ಮ ತಂದೆಯವರೇ ನಮ್ಮ ಕುಟುಂಬದ ಯಜಮಾನಿಕೆಯನ್ನು ಮಾಡುತ್ತಾ ಇದ್ದರು. ನಮ್ಮ ಕುಟುಂಬದಲ್ಲಿ ನಾನು , ನನ್ನ ತಂದೆ , ತಾಯಿ , ನನ್ನ ತಮ್ಮ ಮತ್ತು ನನ್ನ ತಂಗಿಯರಾದ ಅಶ್ವತ್ತಮ್ಮ ಮತ್ತು ರೇಣುಕಾ ಎಲ್ಲರೂ ಒಟ್ಟಿಗೆ ವಾಸ ಇದ್ದೆವು. 1992ನೇ ಇಸವಿಯಲ್ಲಿ 2 ಮತ್ತು 3ನೇ ವಾದಿಯರಿಗೆ ಮದುವೆಯಾಗಿರಲಿಲ್ಲ. 2 ಮತ್ತು 3ನೇ ವಾದಿಯವರಿಗೆ ಯಾವುದೇ ಆಸ್ತಿಯನ್ನು ಭಾಗವಾಗಿ ಕೊಟ್ಟಿರುವುದಿಲ್ಲ. 2 ಮತ್ತು 3ನೇ ವಾದಿಯರ ಮದುವೆಗೆ ಎಂಬುದಾಗಿ ನನ್ನ ತಂದೆಯವರೇ ಹಣ ಮತ್ತು ಒಡವೆಗಳನ್ನು ತಮ್ಮ ಬಳಿ ಇಟ್ಟುಕೊಂಡರು. ಆ ರೀತಿ ನಮ್ಮ ತಂದೆಯವರು ತಮ್ಮ ಬಳಿ ಹಣ ಇಟ್ಟುಕೊಂಡಿದ್ದನ್ನು ನೋಡಿದವರು ಅಥವಾ ತಿಳಿದುಕೊಂಡವರು ಯಾರೂ ಇರುವುದಿಲ್ಲ. ಆ ರೀತಿ 1992 ರಲ್ಲಿ ವಿಭಾಗ ಆಗುವ ಕಾಲಕ್ಕೆ 2 ಮತ್ತು 3ನೇ ವಾದಿಯರನ್ನು ಕರೆಯಿಸಿ ಭಾಗದ ಬಗ್ಗೆ ಏನಾದರೂ ವಿಚಾರಣೆ ಮಾಡಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ನಮ್ಮ ಕುಟುಂಬದಲ್ಲಿ ನಮ್ಮ ತಂದೆಯವರನ್ನು ಬಿಟ್ಟರೆ ನಾನೇ ಹಿರಿಯವನು ಎಂದರೆ ನಿಜ. ಅದೇ ರೀತಿ 2 ಮತ್ತು 3ನೇ ವಾದಿಯರನ್ನು ಭಾಗ ಆಗುವ ಕಾಲಕ್ಕೆ ಅವರನ್ನು ನಾವು ಕರೆದು ಕೇಳಿರುವುದಿಲ್ಲ.

2 ಮತ್ತು 3ನೇ ವಾದಿಯರ ಯೋಗಕ್ಷೇಮವನ್ನು ನಮ್ಮ ತಂದೆಯವರು ಬದುಕಿರುವವರೆಗೆ ನಮ್ಮ ತಂದೆಯವರೇ ನೋಡಿಕೊಳ್ಳುತ್ತಿದ್ದರು ಎಂದರೆ ನಿಜ. ಭಾಗ ಮಾಡುವ ಕಾಲಕ್ಕೆ ಒಟ್ಟು ಮೂರು ಸ್ವತ್ತುಗಳನ್ನು ಹಂಚಿಕೆ ಮಾಡಲು ಇಟ್ಟುಕೊಳ್ಳಲಾಯಿತು. ದಾವಾ 4 ಮತ್ತು 5ನೇ ಐಟಂ ಸ್ವತ್ತುಗಳು ಒಂದೇ ಸ್ವತ್ತು ಆಗಿರುತ್ತವೆ. ದಾವಾ 2 ಮತ್ತು 3ನೇ ಐಟಂ ಸ್ವತ್ತುಗಳು ಎರಡೂ ಸೇರಿ ಒಂದು ಸ್ವತ್ತು ಆಗಿರುತ್ತದೆ. 1ನೇ ಐಟಂ ಸ್ವತ್ತು ಕುರಿತಂತೆ ಆರ್ ಟಿ ಸಿ ಯಲ್ಲಿ ಒಂದು ಎಕರೆ 15 ಗುಂಟೆ ವಿಸ್ತೀರ್ಣ ನಮೂದು ಇದ್ದು ನಮ್ಮ ಕುಟುಂಬಕ್ಕೆ ಸೇರಿರುವ ಸ್ವತ್ತಿನ ವಿಸ್ತೀರ್ಣ 23 ಗುಂಟೆ ಎಂದರೆ ನಿಜ. ಮನೆಯನ್ನು ಮೂರು ಭಾಗವಾಗಿ ಹಂಚಿಕೆ ಮಾಡಲಾಯಿತು. ನನಗೆ, ನನ್ನ ತಮ್ಮನಿಗೆ ಮತ್ತು ನನ್ನ ತಾಯಿಯವರಿಗೆ ತಲಾ ಒಂದು ಭಾಗದಂತೆ ಒಟ್ಟು ಮೂರು ಭಾಗಗಳನ್ನಾಗಿ ಮಾಡಲಾಯಿತು. ಆ ರೀತಿ ಮೂರು ಭಾಗಗಳನ್ನಾಗಿ ವಿಭಾಗಿಸಿದ ನಂತರ ನಮ್ಮಗಳ ಹೆಸರಿಗೆ ಪ್ರತ್ಯೇಕ ಖಾತೆ ಆಗಿರುವುದಿಲ್ಲ. ದಾವಾ 1ನೇ ಐಟಂ ಸ್ವತ್ತನ್ನು ನನಗೆ ಮತ್ತು ನನ್ನ ತಮ್ಮನಿಗೆ ಎರಡು

ಭಾಗಗಳನ್ನಾಗಿ ಮಾಡಲಾಯಿತು. ಅದರಂತೆ ನಮ್ಮಿಬ್ಬರ ಹೆಸರಿಗೆ ಪ್ರತ್ಯೇಕ ಖಾತೆ ಬಂದಿರುವುದಿಲ್ಲ. ನಿಡಿ 1, 2 ಮತ್ತು 3 ದಾಖಲೆಗಳು ನಾವುಗಳು ವಿಭಾಗ ಮಾಡಿಕೊಂಡಂತೆ ಒಕ್ಕಣೆ ಇರುವುದಿಲ್ಲ. 2 ಮತ್ತು 3ನೇ ವಾದಿಯರು ನನ್ನ ಹೆಸರಿಗೆ ಬಂದಂತಹ ಒಂದು ಏಕರೆ ಸ್ವತ್ತಿನ ಆರ್‌ಟಿಸಿಯ ಕ್ರಮ ಬದ್ದತೆಯನ್ನು ಪ್ರಶ್ನಿಸಿ ಮಾನ್ಯ ಉಪ ವಿಭಾಗಾಧಿಕಾರಿಗಳ ಮುಂದೆ ಕೇಸು ಹಾಕಿದ್ದರು ಎಂದರೆ ನಿಜ. ನಿಡಿ 5 ದಾಖಲೆಯು ಸದರಿ ಕೇಸಿಗೆ ಸಂಬಂಧಪಟ್ಟ ಆದೇಶದ ನಕಲು ಆಗಿರುತ್ತದೆ. ಸದರಿ ಆದೇಶದಲ್ಲಿ ಉಪ ವಿಭಾಗಾಧಿಕಾರಿಯು ಸಿವಿಲ್ ನ್ಯಾಯಾಲಯದಲ್ಲಿ ಕೇಸು ಇದ್ದು ಅದರ ತೀರ್ಮಾನದಂತೆ ಉಭಯ ಪಕ್ಷಕಾರರು ನಡೆದುಕೊಳ್ಳುವುದು ಎಂಬುದಾಗಿ ಆದೇಶ ಮಾಡಿದ್ದರು ಎಂದರೆ ನಿಜ. ನಾನು ನಮ್ಮ ಕುಟುಂಬದ ಹಿರಿಯವನಾಗಿ ನನ್ನ ಹೆಸರಿಗೆ ನಿಡಿ 6 ರಿಂದ 8 ರಂತೆ ದಾಖಲೆಗಳ ನಡವಳಿಕೆಗಳು ಆಗಿರುತ್ತವೆ ಎಂದರೆ ಸಾಕ್ಷಿಯು ನನ್ನ ವಾಸದ ಮನೆಯ ಗೋಡೆ ಬಿದ್ದು ಹೋಗಿರುವುದರಿಂದ ಆ ರೀತಿ ದಾಖಲೆಗಳು ಆಗಿರುತ್ತವೆ ಎನ್ನುತ್ತಾರೆ.

ನಮ್ಮಗಳ ನಡುವೆ ಮಂಡ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್. 100/93 ರಂತೆ ದಾವೆ ದಾಖಲಾಗಿತ್ತು ಎಂದರೆ ನಿಜ. ಮದ್ದೂರಿನಲ್ಲಿ ಹಿರಿಯ ಸಿವಿಲ್ ನ್ಯಾಯಾಲಯ ಸ್ಥಾಪನೆಗೊಂಡ ನಂತರ ಸದರಿ ದಾವೆಯು ಮದ್ದೂರು ನ್ಯಾಯಾಲಯಕ್ಕೆ ವರ್ಗಾವಣೆಗೊಂಡು ಓ.ಎಸ್.29/2000 ಎಂಬುದಾಗಿ ಹೊಸದಾಗಿ ನಂಬರನ್ನು ಕೊಡಲಾಯಿತು ಎಂದರೆ ನಿಜ. ಸದರಿ ಕೇಸು ಮಂಡ್ಯ ನ್ಯಾಯಾಲಯದಲ್ಲಿ ಬಾಕಿ ಇದ್ದಾಗಲೇ ನಮ್ಮ ಪರವಾಗಿ ವಕೀಲರನ್ನು ನೇಮಕ ಮಾಡಿಕೊಂಡು ತಕರಾರು ಸಲ್ಲಿಸಿದ್ದೆವು ಎಂದರೆ ನಿಜ. ಅದೇ ರೀತಿ ಸದರಿ ದಾವೆಯಲ್ಲಿ ನಾನು ನನ್ನ ಪರವಾಗಿ ಡಿಡಬ್ಲ್ಯೂ 1 ಎಂಬುದಾಗಿ ಸಾಕ್ಷ್ಯ ವಿಚಾರಣೆ ನಡೆದಿತ್ತು ಎಂದರೆ ನಿಜ. ನನ್ನ ಹೇಳಿಕೆಯನ್ನು ಈಗಾಗಲೇ ನಿಪಿ 12 ಎಂಬುದಾಗಿ ನಿಶಾನಿಸಲಾಗಿದೆ. ಅದೇ ರೀತಿ ನನ್ನ ಪರವಾಗಿ ನಮ್ಮ ವಕೀಲರು ನಿಪಿ 7 ರಂತೆ ಸದರಿ ದಾವೆಯಲ್ಲಿ ಲಿಖಿತ ಹೇಳಿಕೆ ಸಲ್ಲಿಸಿದ್ದರು ಎಂದರೆ ನಿಜ. ಸದರಿ ದಾವೆಯು ಇದೇ ನ್ಯಾಯಾಲಯದಲ್ಲಿ ತೀರ್ಮಾನ ಆಯಿತು ಎಂದರೆ ನಿಜ. ಸದರಿ ದಾವೆಯಲ್ಲಿನ ತೀರ್ಪನ್ನು ಅಥವಾ ತೀರ್ಪಿನ ಯಾವುದೇ ಭಾಗದ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿರಲಿಲ್ಲ. ಸದರಿ ದಾವೆಯಲ್ಲಿನ ವಾದಿಯರು ತೀರ್ಪು ಮತ್ತು ಡಿಕ್ರಿಯ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಆರ್ ಎಫ್ ಎ 384/2002 ರಂತೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನಿಜ. ದಿಃ 05.08.2011 ರಂದು ಮಾನ್ಯ ಉಚ್ಚ ನ್ಯಾಯಾಲಯವು ಸದರಿ ಮೇಲ್ಮನವಿಯಲ್ಲಿ ಆದೇಶ ಮಾಡಿತ್ತು ಎಂದರೆ ನಿಜ. ಸದರಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ನಾನು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ನಮ್ಮ ಕುಟುಂಬದಲ್ಲಿ ಸ್ವತ್ತುಗಳ ಬಗ್ಗೆ ಯಾವುದೇ ವಿಭಾಗ ಆಗಿಲ್ಲ ಎಂದರೆ ಸುಳ್ಳು. ಪ್ರಸ್ತುತ ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ನನಗೆ ಯಾವುದೇ ಸ್ವತ್ತುಗಳು ವಿಭಾಗದಲ್ಲಿ ಬಂದಿರುವುದಿಲ್ಲ ಮತ್ತು ದಾವಾ ಸ್ವತ್ತುಗಳ ಪೈಕಿ ಯಾವುದೇ ಸ್ವತ್ತುಗಳಲ್ಲಿ ನಾನು ಏಕಮೇವ ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನನ್ನು ಒಳಗೊಂಡು ಈ ದಾವೆಯ ಎಲ್ಲಾ ಪಕ್ಷಗಾರರಿಗೂ ದಾವಾ ಸ್ವತ್ತುಗಳಲ್ಲಿ ಕಾನೂನಿನಂತೆ ಭಾಗಾಂಶದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ವಾದಿಯರ ಭಾಗಾಂಶದ ಹಕ್ಕು ಚ್ಯುತಿ ಉಂಟುಮಾಡುವ ಉದ್ದೇಶದಿಂದ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ದುರ್ಲಾಬ

ಪಡೆಯುವ ಮತ್ತು ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ನನ್ನ ಹೆಸರಿಗೆ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ :

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮದ್ದೂರು.**